# ಬುದ್ಧ

ಚಂದಿರನು ಯಾರವನು?
ಯಾಕವನು ಅಲೆಯುತಿಹನು?
ಚರಾಚರಗಳ ಹುಟ್ಟು ಮರಣಗಳಿಗೆ ಸಾಕ್ಷಿ
ಆಕಾಶದ ಗವಾಕ್ಷಿ
ಕಾಣುವನೆಲ್ಲರ ತಲ್ಲಣ ತಳಮಳ
ಕಳೆಯುವನು ಕಳವಳ
ಸುರಿದು ಬೆಳದಿಂಗಳು!

ಸುರಿದ ಬೆಳದಿಂಗಳನೆಲ್ಲಾ
ಹೀರಿದವನೊಬ್ಬ ಅರಳಿ ಸಿದ್ಧನಾದನು
ಬುದ್ಧನಾದನು!



# ಜೋಮಾಲೆ

ಅವಳು ಹೇಳಿದ್ದು:

ದುಡಿದು ದಣಿದು ಕುಡಿದು
ಬಡಿದು ಸೋತು ಸೊಪ್ಪಾಗ
ಕುಂತವನ ಕೆಂಡಗಣ್ಣುಗಳು
ಆರುವುದೋ ಎಂದು ಕಾಯುವೆ

ನೆಟ್ಟಗಿದ್ದ ದಿನ ಬರಿಗೊರಳಿಗೆ
ಅವನ ಕಬ್ಬಿಣದ ಕೈಗಳೇ ಜೋಮಾಲೆ!

‘ನಿನ್ನಾಣೆ, ಬಿಡಿಸಿಕೊಡುವೆ ಅಡವಿಟ್ಟ ತಾಳಿಸರ
ಬರುವ ಮಾರಿಹಬ್ಬಕ್ಕೆ’ ಎಂದವನ ಮಾತಿಗೆ
ಮರುಳಾಗಿ ಕರಗುವೆ, ಒರಗುವೆ!

